ಪಿ.ಡಬ್ಲ್ಯೂ.-1

ದಿನಾಂಕಃ **23.05.2025** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ B.R. ವಕೀಲರಿಂದಃ**

ಫಿರ್ಯಾದಿಯ ಪ್ರಕಾರ ದಿಃ 10.04.2012 ರಂದು ಹಣವನ್ನು ನೀಡಿರುತ್ತೇನೆ. ಸದರಿ ಹಣಕ್ಕೆ ಯಾವುದೇ ಬಡ್ಡಿ ಮಾತುಕತೆಯಾಗಿರಲಿಲ್ಲ. 6 ತಿಂಗಳ ನಂತರ ಆರೋಪಿಗೆ ಹಣವನ್ನು ನೀಡುವಂತೆ ನವೆಂಬರ್ ತಿಂಗಳಲ್ಲಿ ಬೇಡಿಕೆ ಇಟ್ಟಿರುತ್ತೇನೆ. ತದನಂತರ ಆರೋಪಿ ಮತ್ತೆ 6 ತಿಂಗಳ ಸಮಯ ಬೇಕೆಂದು ಕೇಳಿದ್ದರು. ಆ ಸಮಯದಲ್ಲೂ ಕೂಡ ಬಡ್ಡಿಯ ಬಗ್ಗೆ ಮಾತುಕತೆಯಾಗಿರುವುದಿಲ್ಲ. ದಿಃ 06.06.2013 ರಂದು ನಾನು ಚೆಕ್ ನ್ನು ನಗದೀಕರಣಕ್ಕೆ ಸಲ್ಲಿಸಿರುತ್ತೇನೆ. ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ದಿಃ 12.06.2013 ರಂದು ಹಿಂಬರಹ ನೀಡಿರುತ್ತಾರೆ. ನಿಪಿ-3 ನ್ನು ಸಾಕ್ಷಿಗೆ ತೋರಿಸಲಾಗಿ ಈ ಹಿಂಬರಹವನ್ನು ಯಾವುದಕ್ಕಾಗಿ ನೀಡಿದ್ದಾರೆಂದರೆ ಸಾಕ್ಷಿ ದಿಃ 06.06.2013 ರಂದು ನಾನು ನಿಪಿ-1 ನ್ನು ನಗದೀಕರಣಕ್ಕಾಗಿ ಹಾಜರುಪಡಿಸಿದ್ದು ಅದಕ್ಕೆ ನೀಡಿರಬಹುದು ಎಂದು ನುಡಿಯುತ್ತಾರೆ. ಯಾವ ಹಿಂಬರಹದ ಮೇಲೆ ಆರೋಪಿಗೆ ನೋಟಿಸನ್ನು ನೀಡಿದ್ದೀರಿ ಎಂದರೆ ಸಾಕ್ಷಿ ನಿಪಿ-2, ದಿಃ 12.06.2013 ಅದರ ಆಧಾರದ ಮೇಲೆ ನೀಡಿರುತ್ತೇನೆ. ಸಾಕ್ಷಿ ಮುಂದುವರೆದು ಆರೋಪಿಗೆ ಸಾಕಷ್ಟು ಹಣ ಇಲ್ಲ ಎಂದು ಬಂದ ಹಿಂಬರಹದ ಬಗ್ಗೆ ತಿಳಿಸಿದಾಗ, ಆರೋಪಿ ಇನ್ನು 2 ತಿಂಗಳು ಕಾಲಾವಕಾಶ ಕೇಳಿದ್ದರು. ಆರೋಪಿಯನ್ನು ಮೈಸೂರಿನಲ್ಲಿ ಭೇಟಿ ಆಗಿದ್ದೆ. ಭೇಟಿಯಾದ ದಿನಾಂಕವನ್ನು ಹೇಳಲಾಗುವುದಿಲ್ಲ. ನಂತರ ನಾನು ದಿಃ 08.08.2013 ರಂದು ಇನ್ನೊಂದು ಬಾರಿ ಚೆಕ್ ನ್ನು ನಗದೀಕರಣಕ್ಕಾಗಿ ಹಾಕಿರುತ್ತೇನೆ. ದಿಃ 17.08.2013 ರಂದು ಇನ್ನೊಂದು ಬಾರಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ನೀಡಿರುತ್ತಾರೆ. ಸದರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ತಾನು ಸಲ್ಲಿಸಿರುವ ದಾಖಲಾತಿಗಳನ್ನು ಕೊಟ್ಟು ಅದರಲ್ಲಿ ದಿಃ 17.08.2013 ರ ಹಿಂಬರಹವನ್ನು ಗುರುತಿಸುವಂತೆ ಕೇಳಿದ್ದು, ಸಾಕ್ಷಿಯು ಅದರಲ್ಲಿ ಇಲ್ಲ ಎಂದು ನುಡಿಯುತ್ತಾರೆ.

2006 ರಿಂದ ಇಲ್ಲಿಯವರೆಗೂ ಆರೋಪಿ ಕೆ.ಎಸ್.ಆರ್.ಟಿ.ಸಿ ಬಸ್ ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸುತ್ತಿರುವ ವಿಚಾರ ನನಗೆ ಗೊತ್ತು. ದಿಃ 12.06.2013 ಹಿಂಬರಹ ಬಂದ ನಂತರ

2 ದಿನಗಳು ಕಳೆದ ನಂತರ ನಾನು ಆರೋಪಿಯನ್ನು ಭೇಟಿಯಾಗಿರುತ್ತೇನೆ. ಭೇಟಿಯಾದ ದಿನಾಂಕ ದಿಃ 15.06.2013 ನೇ ತಾರೀಖಿನ ಒಳಗೆ ಇರಬಹುದು. ಆರೋಪಿ ಹಣವನ್ನು ನೀಡದಿದ್ದರೂ ಮತ್ತೊಮ್ಮೆ ಬಾರಿ 2 ತಿಂಗಳ ಕಾಲಾವಕಾಶ ಏನಕ್ಕೆ ನೀಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಅವರು ನಮ್ಮ ಕುಟುಂಬದ ಸ್ನೇಹಿತ ಹಾಗೂ ಅವರ ತಂದೆಯೂ ಕೂಡ ಪರಿಚಯವಿದ್ದ ಕಾರಣ ಸಮಯವನ್ನು ನೀಡಿದ್ದೇನೆಂದು ನುಡಿಯುತ್ತಾರೆ. ಪ್ರಸ್ತುತ ವ್ಯವಹಾರವನ್ನು ಆರೋಪಿಯ ತಂದೆಗೆ ಒಂದು ಬಾರಿ ತಿಳಿಸಿರುತ್ತೇನೆ. 2013 ನೇ ಸಾಲಿನಲ್ಲಿ ನಾನು ವರ್ಷಕ್ಕೆ 18-20 ಲಕ್ಷದವರೆಗೆ ವಹಿವಾಟು ಮಾಡುತ್ತಿದ್ದೆ. ಸದರಿ ಆದಾಯದಲ್ಲಿ 8-9 ಲಕ್ಷ ಉಳಿಯುತ್ತಿತ್ತು. ಸದರಿ ಸಂಬಂಧ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ಆರೋಪಿಗೆ ನಾನು ಸಂಪಾದಿಸಿದ ಹಣವನ್ನೇ ನೀಡಿರುತ್ತೇನೆ. 2013-14 ನೇ ಸಾಲಿನಲ್ಲಿ ನನ್ನ ವಾರ್ಷಿಕ ಆದಾಯವನ್ನು ಮನೆಯಲ್ಲೇ ಇಡುತ್ತಿದ್ದೆ, ಬ್ಯಾಂಕಿನಲ್ಲಿ ಹೆಚ್ಚಿನ ವ್ಯವಹಾರ ಇರಲಿಲ್ಲ. ವಾರ್ಷಿಕ ಆದಾಯವಲ್ಲದೇ ನಾನು ಚಿನ್ನವನ್ನು ಅಡವಿಟ್ಟು ಆರೋಪಿಗೆ ಹಣ ನೀಡಿರುತ್ತೇನೆ. 4-5 ಗ್ರಾಂ ತೂಕವುಳ್ಳ 4-5 ಉಂಗುರಗಳನ್ನು, 15 ಗ್ರಾಂ ಚೈನ್ ನ್ನು ಇಟ್ಟಿರುತ್ತೇನೆ. ಒಟ್ಟು ಎಷ್ಟು ಹಣಕ್ಕೆ ಗಿರವಿ ಇಟ್ಟಿರುತ್ತೇನೆಂದು ನೆನಪಿಲ್ಲ. ಗಿರವಿ ಇಟ್ಟ ಚಿನ್ನವನ್ನು 4-5 ವರ್ಷವಾದರೂ ಹೆಚ್ಚು ಬಡ್ಡಿಯಾದ ಕಾರಣ ಬಿಡಿಸಿಕೊಳ್ಳಲು ಆಗಲಿಲ್ಲ. ಸದರಿ ಬಿಲ್ ಗಳನ್ನು ನಾನು ಹಾಜರುಪಡಿಸಿಬಲ್ಲೆ. ಗಿರವಿ ಇಟ್ಟುಕೊಂಡವರು ಮಾಸಿಕವಾಗಿ ಬಡ್ಡಿ 1.5% ವಿಧಿಸುತ್ತಿದ್ದರು.

2013-14 ನೇ ಸಾಲಿನಲ್ಲಿ ನಮ್ಮ ಕುಟುಂಬದ ಖರ್ಚು ತಿಂಗಳಿಗೆ 30-40 ಸಾವಿರ ಇತ್ತು. ಆ ಸಮಯದಲ್ಲಿ ನಮ್ಮ ಕುಟುಂಬದಲ್ಲಿ 6 ಜನ ಇದ್ದೇವು. ನನ್ನ ವಾಸ ಬಿಳಿಕೆರೆ. ನಾನು ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದೇನೆ. ನಮ್ಮ ಮನೆಯಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಆದಾಯ ಗಳಿಸುವುದಿಲ್ಲ ಎಂದರೆ ಸಾಕ್ಷಿ ಬೇರೆಯವರು ದುಡಿಯುತ್ತಾರೆ, ಆದರೆ ಅವರ ಖರ್ಚು ಅವರು ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. 30-40 ಸಾವಿರ ತಿಂಗಳಿಗೆ ಖರ್ಚಾದರೆ, ವರ್ಷಕ್ಕೆ 5 ಲಕ್ಷ ಖರ್ಚಾಗುತ್ತಿದ್ದು, ಉಳಿಕೆ 3-4 ಲಕ್ಷ ಎಂದರೆ ಸರಿ. 3-4 ಲಕ್ಷ ಉಳಿಯುವ ಕಾರಣ ಚಿನ್ನವನ್ನು ಗಿರವಿ ಇಟ್ಟು ಸಾಲವನ್ನು ನೀಡುವ ಪ್ರಮೇಯ ಉದ್ಭವವಾಗುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ಒಬ್ಬ ಸ್ನೇಹಿತನನ್ನು ಪರಿಚಯ ಮಾಡಿಸಿ ಕೊಟ್ಟಿದ್ದು, ಅವರ ಹೆಸರು ನೆನಪಿಲ್ಲ. ಆರೋಪಿಯ ಸ್ನೇಹಿತ ತನ್ನ ವ್ಯಾಪಾರದ ಖರ್ಚಿಗಾಗಿ ಆರೋಪಿಯ ಮುಖಾಂತರ ನಿಮ್ಮ ಬಳಿ 1 ಲಕ್ಷ ಹಣವನ್ನು ಸಾಲವಾಗಿ ಕೇಳಿದ್ದರು ಎಂದರೆ ಸರಿಯಲ್ಲ. ಆರೋಪಿಯ ಸ್ನೇಹಿತನಿಗೆ 1 ಲಕ್ಷವನ್ನು ಕೊಟ್ಟು ನಂತರ ಭದ್ರತೆಗಾಗಿ ಆರೋಪಿಯ ಚೆಕ್ ನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಯ ಸ್ನೇಹಿತನಿಗೆ ನಷ್ಟವಾಗಿ ಊರುಬಿಟ್ಟು ಹೋಗಿದ್ದು, ಆರೋಪಿ ನೀಡಿರುವ 1 ಲಕ್ಷ ಮೊತ್ತವುಳ್ಳ ಚೆಕ್ ನ್ನು 4 ಲಕ್ಷ ಎಂದು ಸಲ್ಲಿಸಿ, ಪಿರ್ಯಾದು ನೀಡಿರುತ್ತೀರಾ ಎಂದರೆ ಸರಿಯಲ್ಲ. 2013-14 ನೇ ಸಾಲಿನಲ್ಲಿ ನಾನು ಯಾವುದೇ ವಹಿವಾಟು ಮಾಡಿರುವುದಿಲ್ಲ, ಸದರಿ ಸಂಬಂಧ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ, ಆರೋಪಿಗೆ 4 ಲಕ್ಷವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಆರೋಪಿಗೆ ಸಂಬಂಧಿಸಿದ ಚೆಕ್ ನ್ನು ದುರುಪಯೋಗಪಡಿಸಿಕೊಂಡು, ಸುಳ್ಳು ಪಿರ್ಯಾದನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ನೀವು ಸ್ನೇಹಿತರಾದ ಕಾರಣ, ಆರೋಪಿ ಈಗಲೂ ಸಹ 1 ಲಕ್ಷವನ್ನು 4 ಕಂತುಗಳಲ್ಲಿ ನಿಮಗೆ ನೀಡಲು ತಯಾರಿದ್ದಾರೆಂದರೆ ಸಾಕ್ಷಿ ನಾನು ನೀಡಿರುವುದು 4 ಲಕ್ಷ, 1 ಲಕ್ಷವಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು